

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜಸೇವಾ ಸಂಘ (ರಿ) ಸುಳ್ಯ, ದ.ಕ
website :www.sthanikasamjasullia.webs.com

# ಓಂ ಸ್ಥಾನಿಕ ಸಂಪದ



Reg. No : KARKAN 2008/2604



ಸಂಪುಟ : 7
ಸಂಚಿಕೆ : 08

OFFICE OF POSTING SULLIA MDG POST OFFICE
PTR/117/2015-17 DATE OF POSTING 16TH EVERY MONTH

ಆಗಸ್ಟ್ : 2016
ಪುಟಗಳು : 6


## ಶ್ರೀ ಶ್ರೀ ಜಗದ್ಗುರುಗಳವರ ಅನುಗ್ರಹ ಭಾಷಣ

### ಒಂದು ಸತ್ತ್ವಯುತವಾದ ಅರ್ಪಣೆ

ಹಿಂದಿನ ಸಂಚಿಕೆಯಿಂದ

ಹಾಲು–ಮೊಸರು ಮಾರಿಕೊಂಡು ಜೀವನವನ್ನು ಸಾಗಿಸುತ್ತಿದ್ದ ಗೋಪಿಯರು, ಗೋಪಾಲನನ್ನು ಎಷ್ಟೊಂದು ಏಕಾಗ್ರಚಿತ್ತದಿಂದ ಯೋಚಿಸುತ್ತಿದ್ದರೆಂದರೆ, ಹಾಲು–ಮೊಸರು' ಎಂದು ಕೂಗುವ ಬದಲು 'ಗೋವಿಂದ–ದಾಮೋದರ–ಮಾಧವ' ಎಂದು ಕೂಗತೊಡಗಿದರು. 'ಹಾಲು–ಮೊಸರು' ಇವು ಅವರ ಬಾಯಿಂದ ಬರಲಿಲ್ಲ. ಭಗವಂತನ ನಾಮವನ್ನು ಉಚ್ಚರಿಸತೊಡಗಿದರು.

ಈ ಒಂದು ಉದಾಹರಣೆಯೇ ನಮಗೆ ತೋರಿಸುತ್ತದೆ ನಾವು ಸದಾ ಭಗವಂತನಲ್ಲಿ ಮನಸ್ಸನ್ನು ಲೀನ ಮಾಡಬೇಕು ಎಂದು. ಗೋಪಿಯರ ಹಾಗೆ ನಾವು ಸದಾ ಅವನ ನಾಮಸ್ಮರಣೆ ಮಾಡಬೇಕು.

ಭಗವಂತನು ನಾವು ಏನನ್ನು ಕೊಟ್ಟರೂ ತೆಗೆದುಕೊಳ್ಳುತ್ತಾನೆ.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ॥

'ಭಕ್ತಿಯಿಂದ ಕೊಟ್ಟದ್ದನ್ನು ಏನನ್ನಾದರೂ ಸ್ವೀಕರಿಸುತ್ತೇನೆ. ಭಗವಂತನೇ ಈ ಮಾತುಗಳನ್ನು ಹೇಳಿದ ಮೇಲೆ ನಮಗೆ ಸಂಶಯಬರಬಾರದು. ಭಗವಂತನ ವಾಕ್ಯವನ್ನೇ ನಂಬಲಿಲ್ಲವೆಂದರೆ.'ಸಂಶಯಾತ್ಮ ವಿನಶ್ಯತಿ' ಎಂದಾಗುತ್ತದೆ.ಹಾಗಾಗಿ ಅವನ ಹೇಳಿಕೆಯ ಬಗೆಗೆ ಸಂಶಯ ಕೂಡದು. ನಾವು ಭಗವಂತನಿಗೆ ಏನನ್ನು ಸಮರ್ಪಿಸಿದರೂ ಭಕ್ತಿಯಿಂದ ಸಮರ್ಪಿಸಬೇಕು.

ಯಾವುದೇ ಯೋಗ್ಯತೆಯೂ ಇಲ್ಲದವನು, ಜ್ಞಾನ ಮಾರ್ಗವನ್ನೂ ಅನುಸರಿಸಲು ಆಗದವನು. ಭಕ್ತಿ ಮಾರ್ಗವನ್ನೂ ಅನುಸರಿಸಿ ಶ್ರೇಯೋವಂತನಾಗಬೇಕು.

ಭಕ್ತಿ ಎಂದರೇನು?

ಭಗವಂತನಲ್ಲಿ ಅತ್ಯಂತ ಪ್ರೀತಿಯನ್ನು ಹೊಂದಿರುವುದೇ ಭಕ್ತಿ.

"ಸಾ ತ್ವಸ್ಮಿನ್ ಪರಮಪ್ರೇಮರೂಪಾ॥"

ಮುಂದುವರಿಯುವುದು........


ಪತ್ರಿಕೆಯ ಪ್ರಾಯೋಜಕರು

ಶ್ರೀಮತಿ ಜಯಶ್ರೀ ಮತ್ತು ಶ್ರೀನಿವಾಸ ರಾವ್
ನೈತಾಡಿ
ಪ್ರಾರ್ಥನಾ ಮನೆ ಬೀರಮಂಗಲ ಸುಳ್ಯ

ಕೃಪಾಶಂಕರ ತುದಿಯಡ್ಕ ಮತ್ತು
ಮನೆಯವರು ಆಲೆಟ್ಟಿ ಸುಳ್ಯ




*ಸಂಪಾದಕೀಯ*


*ಡಾ.ಸದಾಶಿವ ರಾವ್*
sadashiva.dr@gmail.com




## ಸದ್ಗುರುಗಳಿವರು

ಶಾಂತಾ ಮಹಾಂತೋ ನಿವಸಂತಿ ಸಂತಃ
ವಸಂತವಲ್ಲೋಕಹಿತಂ ಚರಂತಃ।
ತೀರ್ಣಾಃ ಸ್ವಯಂ ಭೀಮಭವಾರ್ಣವಂ ಜನಾನ್
ಅಹೇತುನಾನ್ಯಾನಪಿ ತಾರಯಂತಃ॥

ಸತ್ಪುರುಷರಾದ ಮಹಾತ್ಮರು ಶಾಂತರಾಗಿ ಎಲ್ಲರಿಗೂ ವಸಂ
ತ ಋತುವಿನಂತೆ ಆನಂದವನ್ನು ಉಂಟುಮಾಡುತ್ತಾ ಇರುತ್ತಾರೆ. ಇಂಥ ಸತ್ಪುರುಷರು ಭಯಂಕರವಾದ ಸಂಸಾರ ಸಾಗರವನ್ನು ತಾವು ಸ್ವಯಂ ದಾಟಿದವರಾಗಿ ಉಳಿದ ಜನಗಳನ್ನೂ ಪ್ರೀತಿಯಿಂದ ದಾಟಿಸುತ್ತಾ ಲೋಕಾನುಗ್ರವನ್ನು ಮಾಡುತ್ತಾ ಇರುತ್ತಾರೆ.

ಸತ್ಪರುಷರಾದ ಮಹಾತ್ಮರಾದ ಸದ್ಗುರುಗಳ ಆರು ಲಕ್ಷಣಗಳನ್ನೂ ಸ್ವಭಾವವನ್ನೂ ಇಲ್ಲಿ ತಿಳಿಸಿರುತ್ತದೆ:

1. ಶಾಂತಾಃ –ಯಾವಾಗಲೂ ಸಂತೋಷವಾಗಿದ್ದು ಶಾಂತರಾಗಿರುತ್ತಾರೆ.
2. ಮಹಾಂತಃ – ಮಹಾತ್ಮರಿವರು. ಉದಾರ ಹೃದಯವುಳ್ಳವರಾಗಿ ಎಲ್ಲರನ್ನೂ ಸಮಾನವಾಗಿ ಕಾಣುತ್ತಾ ಸಮದೃಷ್ಟಿಯುಳ್ಳವರಾಗಿರುತ್ತಾರೆ.
3. ಸಂತಃ – ಸತ್ಪುರುಷರಿವರು. ಮನಸ್ಸಿನಲ್ಲಿ , ವಾಕ್ಕಿನಲ್ಲಿ ಮತ್ತು ಕ್ರಿಯೆಯಲ್ಲಿ ಜಗತ್ತಿಗೆ ಒಳ್ಳೆಯದನ್ನೇ ಮಾಡುವವರಿವರು.
4. ಲೋಕಹಿತಂ ಚರಂತಃ – ವಸಂತಮಾಸದಂತೆ ಸತ್ಪುರುಷರು ಯಾವಾಗಲೂ ಲೋಕಕ್ಕೆ ಹಿತವನ್ನೇ, ಸಂತೋಷವನ್ನೇ, ಒಳ್ಳೆಯದನ್ನೇ ಮಾಡುತ್ತಿರುತ್ತಾರೆ.
5. ಸ್ವಯಂ ತೀರ್ಣಾಃ – ಸಂಸಾರವೆಂಬ ದುಃಖಸಾಗರವನ್ನು ಆತ್ಮಜ್ಞಾನವೆಂಬ ಹಡಗಿನಿಂದ ತಾವು ಸ್ವಯಂ ದಾಟಿರುತ್ತಾರೆ.
6. ಅನ್ಯಾನಪಿ ತಾರಯಂತಃ – ಬೇರೆಯ ಜನಗಳನ್ನೂ ಕರುಣೆಯಿಂದ ಈ ದುಃಖಸಾಗರದಿಂದ ದಾಟಿಸುವವರೇ ಸದ್ಗುರುಗಳು.

ಸದ್ಗುರುಗಳಾದವರು ಲೋಕಕ್ಕೆ ಹಿತವನ್ನು ಬಯಸಬೇಕು. ಸದ್ಗುರುಗಳಾದ ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿ ಹಾಗೂ ಶ್ರೀ ಶ್ರೀ ವಿಧು ಶೇಖರ ಸ್ವಾಮಿಗಳ ದರ್ಶಪ್ರಯುಕ್ತನ ಮಾಡಲು ತಾ 27–08–16 ರಂದು ಶೃಂಗೇರಿಗೆ ಪ್ರಯಾಣ ಮಾಡೋಣ. ಬನ್ನಿ

## ಈ ತಿಂಗಳ ಶುಭದಿನಗಳು

### ದುರ್ಮುಖ ಸಂವತ್ಸರದ ದಕ್ಷಿಣಾಯನ ವರ್ಷಋತು ಶ್ರಾವಣ ಮಾಸ
### 16–08–2016 ರಿಂದ 15–09–2016 ರವರೆಗೆ

16–08–2016 – ಸಿಂಹಸಂಕ್ರಮಣ
17–08–2016 – ಓಣಂ
18–08–2016 – ಪೌರ್ಣಮಿ, ರಕ್ಷಾಬಂಧನ
24–08–2016 – ಶ್ರೀ ಕೃಷ್ಣ ಜನ್ಮಾಷ್ಟಮಿ
01–09–2016 – ಅಮವಾಸ್ಯೆ
05–09–2016 – ಗಣೇಶ ಚತುರ್ಥಿ. ಶಿಕ್ಷಕರ ದಿನಾಚರಣೆ
16–09–2016 – ಪೌರ್ಣಮಿ ಕನ್ಯಾಸಂಕ್ರಮಣ

## ಧಾರ್ಮಿಕ ಪ್ರಶ್ನೋತ್ತರ

ಪ್ರಶ್ನೆ 1. : ಹಿಂದೂ ಧರ್ಮದಲ್ಲಿ ಗೋವುಗಳಿಗೇಕೆ ಅಷ್ಟು ಮಹತ್ವ?

ಉತ್ತರ : 'ಗಾವೋ ವಿಶ್ವಸ್ಯ ಮಾತರಃ– ಗೋವುಗಳು ಸಮಗ್ರ ಪ್ರಪಂಚಕ್ಕೆ ಮಾತೃಸ್ವರೂಪಿಗಳು– ಎಂಬುದು ಹಿಂದೂ ಧರ್ಮದ ಅಭಿಮತ. ಏಕೆಂದರೆ, ಜನ್ಮವಿತ್ತ ತಾಯಿ ನಮಗೆ ತನ್ನ ಮೊಲೆ ಹಾಲು ಕೊಡುವುದು ಒಂದೋ ಎರಡೋ ವರ್ಷ ಮಾತ್ರ. ಆದರೆ ಗೋವುಗಳು ಜೀವನಪರ್ಯಂತ ಹಾಲು ನೀಡಿ ನಮ್ಮನ್ನು ಪೋಷಿಸುತ್ತವೆ. 'ಸರ್ವೇದೇವಾಃ ಸ್ಥಿತಾ ದೇಹೇ' ಎಂಬಂತೆ ಗೋವಿನಲ್ಲಿ ನಖದಿಂದ ಶಿಖೆಯವರೆಗೆ ಹಿಂದೂ ದೇವತೆಗಳೆಲ್ಲ ವಾಸ ಮಾಡಿಕೊಂಡಿರುತ್ತಾರೆ.ಅರವತ್ತನಾಲ್ಕು ಯೋನಿಗಳಲ್ಲಿ ಅಲೆದಾಡುವ ಜೀವಾತ್ಮ ಮನುಷ್ಯ ಯೋನಿಯಲ್ಲಿ ಹುಟ್ಟುವ ಮುನ್ನ ಪರಮ ಸಾತ್ವಿಕವೆನಿಸಿದ ಗೋಯೋನಿಯಲ್ಲಿ ಜನ್ಮ ತಳೆಯುತ್ತದೆಂದು ಶಾಸ್ತ್ರಗ್ರಂಥಗಳು ಸಾರುತ್ತವೆ. ಸತ್ತ ನಂತರವೂ ಗೋವಿನ ಚರ್ಮವನ್ನು ಮನುಷ್ಯ ಪಾದರಕ್ಷೆ, ಭೇರಿ, ನಗಾರಿ, ಮೊದಲಾದ ಬಗೆ ಬಗೆಯ ವಾದ್ಯೋಪಕರಣಗಳಿಗೆ ಬಳಸುತ್ತಾನೆ. ಗೋವಿನ ಹಾಲು,ಮೊಸರು,ತುಪ್ಪ, ಸಗಣಿ. ಮೂತ್ರ– ಇವೆಲ್ಲವೂ ಒಂದಲ್ಲ ಒಂದು ಬಗೆಯಲ್ಲಿ ಮನುಷ್ಯನ ಜೀವನಕ್ಕೆ ತುಂಬ ಉಪಯುಕ್ತ. ಹಾಗಾಗಿ ನಮ್ಮ ಧರ್ಮದಲ್ಲಿ ಗೋವುಗಳಿಗೆ ಅಷ್ಟೊಂದು ಮಹತ್ತ್ವದ ಸ್ಥಾನ.

ಪ್ರಶ್ನೆ 2. ಹರಿಕಥೆಗಳನ್ನು ಕೇಳುವುದು ಅವಶ್ಯಕವೆ ?

ಹರಿಕಥೆಯನ್ನು ಜನರಲ್ಲಿ ಭಕ್ತಿ ಭಾವನೆಯನ್ನು ಮೂಡಿಸಲು ಹೇಳುತ್ತಿದ್ದರು. ಹರಿಕಥೆಯಲ್ಲಿ ಸಂಗೀತ ವಾದ್ಯ ಎಲ್ಲವೂ ಇರುತ್ತದೆ. ಅದು ಮನೋರಂಜನೆಯನ್ನು ನೀಡುತ್ತವೆ ಮತ್ತು ಒಳ್ಳೆಯ ಮನೋಭಾವನೆಯನ್ನು, ಸದ್ಗುಣವನ್ನು ಜನರ ಮನದಲ್ಲಿ ಮೂಡಿಸಲು ಹರಿಕಥೆಯನ್ನು ಹೇಳುತ್ತಿದ್ದರು. ಅದನ್ನು ಕೇಳಿದರೆ ಮನಸ್ಸಿಗೆ ಮುದವಾಗುತ್ತದೆ. ದೇವರು ನಮ್ಮನ್ನು ಸದಾ ಕಾಪಾಡುತ್ತಾನೆ ಎಂಬ ನಂಬಿಕೆ ಹುಟ್ಟುತ್ತದೆ. ಹಾಗಾಗಿ ಹರಿಕಥೆಯನ್ನು ಕೇಳುವುದು ಉತ್ತಮ.

ಪ್ರಶ್ನೆ 3. ನಮ್ಮ ಜೀವನದಲ್ಲಿ ಅತ್ಯಂತ ಪ್ರಶಸ್ತವಾದ ದಿನ ಯಾವುದು?

ನಮ್ಮ ಪೂರ್ವಜರು ಹೇಳಿರುವಂತೆ –

ಕೃತಗಂಗೋದಕಸ್ನಾನಂ ಶ್ರುತಭಾರತಸತ್ಕಥಮ್।
ಅರ್ಚಿತಾಚ್ಯುತಪಾದಾಬ್ಜಂ ದಿನಂ ಕಲ್ಪಶತಾಧ್ವರಮ್॥

ಎಂದಿನ ದಿನ ಪವಿತ್ರವಾದ ತೀರ್ಥದಲ್ಲಿ ಸ್ನಾನವನ್ನು ಮಾಡುತ್ತೇವೆಯೋ,ಯಾವ ದಿನ ಭಗವಂತನನ್ನು ಪೂಜಿಸುತ್ತೇವೆಯೋ, ಪವಿತ್ರವಾದ ಮಹಾಭಾರತದಂತಹ ಕಥಾಶ್ರವಣವನ್ನು ಮಾಡುತ್ತೇವೆಯೋ– ಅಂದೇ ನಮ್ಮ ಜೀವನದಲ್ಲಿ ಅತ್ಯಂತ ಪವಿತ್ರವಾದ ದಿನ. ಇದಾವುದನ್ನೂ ಮಾಡದೇ, ಪುಣ್ಯತೀರ್ಥದಲ್ಲಿ ಸ್ನಾನಮಾಡದೆ, ದೇವರನ್ನು ಪೂಜಿಸದೆ, ಪುಣ್ಯಕಥೆಗಳ ಶ್ರವಣವನ್ನು ಮಾಡದೇ ಇದ್ದಲ್ಲಿ ಅದು ಎಂತಹ ಜೀವನ?ಆದ್ದರಿಂದಲೇ ಪ್ರತಿದಿನವೂ ಮನುಷ್ಯನು ತನ್ನ ಮನಸ್ಸನ್ನು ತಾನೇ ಪ್ರಶ್ನಿಸಿಕೊಳ್ಳಬೇಕು. " ಇಂದಿನ ದಿನವನ್ನು ನಾನು ಯಾವ ರೀತಿಯಲ್ಲಿ ಕಳೆದೆ? ಇಂದು ಯಾವುದಾದರೂ ಸತ್ಕಾರ್ಯವನ್ನು ಮಾಡಿರುವೆನಾ ಇಲ್ಲವೇ ಇಂದೂ ವ್ಯಥವಾಗಿ ಕಳೆದಿರುವೆನಾ" ನಾವು ಯಾರಿಗೂ ವರದಿಯನ್ನು ಒಪ್ಪಿಸಬೇಕಾಗಿಲ್ಲ. ನಮ್ಮ ಮನಸ್ಸಿಗೆ ಉತ್ತರವನ್ನು ನೀಡಿದರೆ ಸಾಕು. ಏಕೆಂದರೆ ನಾವು ಮನಸ್ಸಿನಿಂದ ಯಾವುದೇ ವಿಷಯವನ್ನೂ ಮುಚ್ಚಿಡಲಾಗುವುದಿಲ್ಲ. ಹೊರಗಿನ ಪ್ರಪಂಚದಲ್ಲಿ ನಾವು ಯಾರಿಗೆ ಬೇಕಾದರೂ ಸುಳ್ಳನ್ನು ಹೇಳಬಹುದು; ಆದರೆ ನಮ್ಮ ಮನಸ್ಸಿಗೆ ನಾವು ಸುಳ್ಳನ್ನು ಹೇಳಲಾಗುದಿಲ್ಲ. ಎಲ್ಲರಿಗೂ ಮನಸ್ಸಾಕ್ಷಿ ಎಂಬುದಿದೆ. ಆ ಮನಸ್ಸಾಕ್ಷಿಯ ಬಳಿ ನಾವು ಯಾವುದೇ ಮುಚ್ಚುಮರೆಯನ್ನು ಮಾಡಲಾಗುವುದಿಲ್ಲ.ಒಬ್ಬ ಕಳ್ಳನ ವಿಷಯದಲ್ಲೂ, ಅವನು ಆರಕ್ಷರಕರ ಬಳಿ, ಕೋರ್ಟಿನಲ್ಲಿ ಎಷ್ಟೇ ಸುಳ್ಳನ್ನು ಹೇಳಿದರೂ, ಆತನ ಮನಸ್ಸಿಗೆ ತಾನು ಕಳ್ಳತನ ಮಾಡಿರುವುದು ನಿಜ ಎಂದು ತಿಳಿದಿರುತ್ತದೆ. ತನ್ನ ಮನಸ್ಸಿಗೇ ಅವನು ಸುಳ್ಳನ್ನು ಹೇಳಲಾಗುವುದಿಲ್ಲ.

ನಾನು ಇಂದು ಸತ್ಪುರುಷನ ರೀತಿಯಲ್ಲಿ ನಡೆದುಕೊಂಡೆನೋ, ಇಲ್ಲವೇ ಪಶುವಿನ ರೀತಿಯಲ್ಲಿ ನಡೆದುಕೊಂಡೆನೋ? ಇಂದು ಸತ್ಪರುಷನ ರೀತಿಯಲ್ಲಿ ನಡೆದುಕೊಂಡೆ ಎಂಬ ಉತ್ತರ ಬಂದರೆ ಆ ದಿನವು ಪವಿತ್ರವಾದ ದಿನ. ಇಂದು ಯಾವ ಸತ್ಕಾರ್ರ್ಯವನ್ನೂ ಮಾಡಲಿಲ್ಲ. ಸಾಧಾರಣವಾಗಿ ಪ್ರಾಣಿಗಳು ಸಮಯವನ್ನು ಕಳೆಯುವ ರೀತಿಯಲ್ಲಿ ಈ ದಿನವೂ ಕಳೆದುಹೋಯಿತು ಎಂದರೆ, ಆ ದಿನವೂ ವ್ಯರ್ಥವಾಯಿತು. ನಾವು ಜೀವನವನ್ನು ವ್ಯರ್ಥವಾಗಿ ಕಳೆದರೆ, ಅತ್ಯಂತ ಅವಿವೇಕಿಗಳಾಗುತ್ತೇವೆ. ಏಕೆಂದರೆ, ಮೊದಲೇ ಹೇಳಿದಂತೆ, ಈ ಮನುಷ್ಯ ಜನ್ಮವು ಮತ್ತೆ ನಮಗೆ ಲಭಿಸುತ್ತದೆ ಎಂಬುದು ಖಚಿತವಲ್ಲ.



**ಪ್ರಶ್ನೆ 1:– ಅಲಾಯಿದಾ ಬೆಲೆ ಎಷ್ಟೆಷ್ಟು?**

ಒಂದು ಬಿಲ್ಲು, ಒಂದು ಬಾಣ ಎರಡರ ಬೆಲೆಯೂ 21 ರೂ. ಬಿಲ್ಲು ಬಾಣಕ್ಕಿಂತಲೂ 20 ರೂಪಾಯಿಯಷ್ಟು ಹೆಚ್ಚು ಬೆಲೆಯಾದರೆ, ಬಿಲ್ಲು ಬಾಣದ ಅಲಾಯಿದಾ ಬೆಲೆ ಎಷ್ಟೆಷ್ಟು?

**ಪ್ರಶ್ನೆ 2 :– ಮನುಷ್ಯನ ವಯಸ್ಸೆಷ್ಟು?**

ಒಬ್ಬ ಮನುಷ್ಯನು ಕ್ರಿ.ಪೂ. 50 ರಲ್ಲಿ ಹುಟ್ಟಿದ್ದಾನೆ. ಕ್ರಿಸ್ತಶಕ 50 ರ ವೇಳೆಗೆ ಅವನ ವಯಸ್ಸೆಷ್ಟು?

**ಪ್ರಶ್ನೆ 3 :– ಸಮಯ ಎಷ್ಟು ?**

ಗಡಿಯಾರವು ಕನ್ನಡಿಯಲ್ಲಿ 3 ಗಂಟೆಗೆ 20 ನಿಮಿಷ ತೋರಿಸುತ್ತಿದ್ದರೆ, ಆಗ ಆಗಿರುವ ಸಮಯ ಎಷ್ಟು?

ನಿಮ್ಮ ಉತ್ತರವನ್ನು 9448120411 ಗೆ ಕಳುಹಿಸಿ ಸರಿಯಾದ ಉತ್ತರ ಪಡೆಯಿರಿ

---

ಸದಾಚಾರದ ಪಾಲನೆಯಿಂದ ಲಾಭ

ಆಚಾರಾಲ್ಲಭತೇ ಹ್ಯಾಯುರಾಚಾರಾದೀಪ್ಸಿತಾಃ ಪ್ರಜಾಃ।
ಆಚಾರದ್ಧನಮಕ್ಷಯ್ಯಾಚರೋ ಹಂತ್ಯಲಕ್ಷಣಮ್॥
–ಮನು 4.156

ಸದಾಚಾರದ ಪಾಲನೆಯಿಂದ ಮನುಷ್ಯನು ದೀರ್ಘಾಯುವನ್ನು ಹೊಂದುತ್ತಾನೆ, ಸದಾಚಾರದ ಪಾಲನೆಯಿಂದ ಮನುಷ್ಯನಿಗೆ ಶ್ರೇಷ್ಠ ಸಂತತಿಯು (ಮಕ್ಕಳು, ಮೊಮ್ಮಕ್ಕಳು ಆದಿ) ಪ್ರಾಪ್ತವಾಗುತ್ತದೆ. ಸದಾಚಾರದ ಪಾಲನೆಯಿಂದ ಮನುಷ್ಯನು ಅಕ್ಷಯ ಧನಸಂಪತ್ತಿಯನ್ನು ಪಡೆಯುತ್ತಾನೆ. ಸದಾಚಾರದ ಗುಣವು ಎಂತಹುದೆಂದರೆ ಅದು ಮನುಷ್ಯನ ಸಮಸ್ತ ದೋಷಗಳು ಮತ್ತು ದುರ್ಗುಣಗಳನ್ನು ನಾಶಮಾಡುತ್ತದೆ.

---

## ಜಗದ್ಗುರುಗಳ ಚಾತುರ್ಮಾಸ್ಯ ವ್ರತ

'ಚಾತುರ್ಮಾಸ್ಯ' ಎಂಬ ಶಬ್ದವೇ ಸೂಚಿಸಿದಂತೆ ' ನಾಲ್ಕು ತಿಂಗಳ ವ್ರತ' ಎಂಬುದು ಇದರ ಸಾಮಾನ್ಯಾರ್ಥ. ಆದರೆ ಪಕ್ಷೋವೈ ಮಾಸಃ ಎಂಬ ಶೃತಿ ವಾಕ್ಯಕ್ಕನುಗುಣವಾಗಿ ಒಂದು ಪಕ್ಷವನ್ನೇ ಒಂದು ತಿಂಗಳೆಂದು ಭಾವಿಸಿದಾಗ ಇದು ನಾಲ್ಕು ಪಕ್ಷಗಳೆಂಬ ಅರ್ಥವನ್ನು ಕೊಡುತ್ತದೆ. ಯತಿಗಳು ಪರಿವ್ರಾಜಕರು; ಅವರು ಸ್ವಧರ್ಮದಂತೆ ದೇಶ ಸಂಚಾರ ಮಾಡುತ್ತಿರುತ್ತಾರೆ. ಆದರೆ ಮಳೆಗಾಲದಲ್ಲಿ ಅವರು ಸಂಚಾರ ಮಾಡಬಾರದು. ಇದಕ್ಕೆ ಕಾರಣ ಅಹಿಂಸೆಯ ಪರಿಪಾಲನೆ. ಆಷಾಢದ ಮಳೆಗೆ ಎಲ್ಲೆಲ್ಲೂ ಕ್ರಿಮಿಕೀಟಗಳು ಹುಟ್ಟಿಕೊಂಡಿರುತ್ತವೆ. ಕೃಷಿಕರು ಬಿತ್ತನೆ ಆರಂಭಿಸುತ್ತಾರೆ. ಅನೇಕ ಬಗೆಯ ಸಸ್ಯಗಳು ಮೊಳಕೆಯೊಡೆದು, ಭೂಮಿಯನ್ನು ಭೇದಿಸಿ ಹುಟ್ಟಿಕೊಳ್ಳುತ್ತವೆ. ನಿರಂತರ ಮಳೆಯಿಂದಾಗಿ ಭೂಮಿಯೂ ಮೆದುವಾಗುತ್ತದೆ.ಹಾಗಾಗಿ ಆಗ ಸಂಚರಿಸಿದರೆ ತಿಳಿದೋ, ತಿಳಿಯದೆಯೋ ಹಿಂಸೆ ಮಾಡಿದಂತಾಗುತ್ತದೆ. ಅಹಿಂಸೆ ಸನ್ಯಾಸಾಶ್ರಮಿಯ ಪ್ರಮುಖ ವ್ರತ. ಚಾತುರ್ಮಾಸ್ಯ ಸಂಕಲ್ಪದಲ್ಲಿ ಹೇಳುವಂತೆ 'ಸಾಮಾನ್ಯವಾಗಿ ಮಳೆಗಾಲದಲ್ಲಿ ದಾರಿ ಅನೇಕ ಸೂಕ್ಷ್ಮ ಜೀವಿಗಳಿಂದ ತುಂಬಿರುತ್ತದೆ. ಅವುಗಳಿಗೆ ಹಿಂಸೆ ಮಾಡಬಾರದಾದ್ದರಿಂದ ಶ್ರುತಿಸಮ್ಮತವಾದ ನಾಲ್ಕು ಪಕ್ಷಗಳ ಕಾಲ ಒಂದೇ ಸ್ಥಳದಲ್ಲಿ ಇರುತ್ತೇನೆ'. (ಪ್ರಾಯೇಣ ಪ್ರಾವೃಷಿ ಪ್ರಾಣಿಸಂಕುಲಂ ವರ್ತ್ಮದೃಶ್ಯತೇ। ಅತಸ್ತೇಷಾಂ ಅಹಿಂಸಾರ್ಥಂ ಪಕ್ಷಾನ್ ವೈವಿ ಶೃತಿ ಸಂಶ್ರಯಾನ್, ಸ್ಥಾಸ್ಯಾಮುಶ್ಚತುರೋ ಮಾಸಾನ್...॥) ಎಂದು ಈ ವ್ರತವನ್ನು ಆರಂಭಿಸಲು ಸಂಕಲ್ಪಿಸುತ್ತಾರೆ.ಆದ್ದರಿಂದ ಯತಿಗಳು ಪಾಲಿಸಬೇಕಾದ ಅಹಿಂಸಾಧರ್ಮವೇ ಚಾತುರ್ಮಾಸ್ಯ ವ್ರತಕ್ಕೆ ಮೂಲ ಕಾರಣ.

ಚಾತುರ್ಮಾಸ್ಯ ವ್ರತಕ್ಕೆ ಇನ್ನೊಂದು ಕಾರಣವೂ ಇದೆ. ಸೃಷ್ಟಿಕರ್ತನಾದ ಮಹಾವಿಷ್ಣುವು ಆಷಾಢ ಮಾಸದಿಂದ ಕಾರ್ತಿಕಮಾಸದವರೆಗೆ ಅಂತರ್ಮುಖಿಯಾಗಿ ದಿವ್ಯನಿದ್ರೆಯಲ್ಲಿ ಮಗ್ನನಾಗಿರುತ್ತಾನೆ. ಆ ಸಮಯದಲ್ಲಿ ಯತಿಗಳಾದವರು ಅಂತರ್ಮುಖಿಗಳಾಗಿ ತಮ್ಮ ಸಾಧನೆಯಲ್ಲಿ ಹೆಚ್ಚು ತೊಡಗಬೇಕು. ಹಾಗೆ ಮಾಡಿದಾಗ ಸಮಾಜ ಹಸನಾಗಲೂ ಸಾಧ್ಯ; ಸಾತ್ವಿಕ ಶಕ್ತಿಯ ಸಂಚಾರ ಎಲ್ಲೆಡೆ ಆಗಲು ಸಾಧ್ಯ.

ಪೂರ್ವಪರಂಪರೆಗೆ ಕಿಂಚಿತ್ತೂ ಚ್ಯುತಿ ಬಾರದಂತೆ ಶಾಸ್ತ್ರೋಕ್ತವಾಗಿ ಚಾತುರ್ಮಾಸ್ಯ ವ್ರತವನ್ನು ಆಚರಿಸುವವರು ಪ್ರಾಯಶಃ ಶೃಂಗೇರಿ ಶ್ರೀ ಶಾರದಾಪೀಠದ ಅವಿಚ್ಛಿನ ಪರಂಪರೆಯ ಗುರುಗಳು ಮಾತ್ರ. ತಮ್ಮ ಧರ್ಮಯಾತ್ರೆಗಳ ಸಂದರ್ಭದಲ್ಲೂ ಸೂಕ್ತವಾದ ಸ್ಥಳಗಳನ್ನು ಮೊದಲೇ ಆಯ್ಕೆ ಮಾಡಿ, ಸಕಲ ಸಿದ್ಧತೆಗಳೊಂದಿಗೆ ಶೃಂಗೇರಿಯಲ್ಲಿ ಹೇಗೋ ಹಾಗೆಯೇ ಅಲ್ಲೂ ಈ ವ್ರತವನ್ನು ಸ್ವಲ್ಪವೂ ಲೋಪವಾಗದಂತೆ ಆಚರಿಸುತ್ತಿರುವುದು ಶೃಂಗೇರಿ ಧರ್ಮಸಂಸ್ಥಾನದ ವೈಶಿಷ್ಟ್ಯಗಳಲ್ಲೊಂದು.

## ನಿಧನ

ಸುಳ್ಯದ ಬೊಳುಬೈಲಿನಲ್ಲಿರುವ ರಾಧಾಕೃಷ್ಣರಾಯರ ಮನೆಯಲ್ಲಿ ಇರುವ ಭಾಗೀರಥಿ ಅಮ್ಮನವರು ದಿನಾಂಕ 11-08-2016 ರಂದು ಅನಾರೋಗ್ಯದಿಂದ ನಿಧನರಾದರು. ಇವರಿಗೆ 85 ವರ್ಷಗಳಾಗಿದ್ದು. ತಮ್ಮ ಬಂಧುಗಳನ್ನು ಅಗಲಿರುತ್ತಾರೆ.

---

## ಶೃಂಗೇರಿ ಗುರುದರ್ಶನ ಯಾತ್ರೆ

ತಾ 27-08-2016ನೇ ಬೆಳಗ್ಗೆ 4.50ಕ್ಕೆ ಸುಳ್ಯದ ಜ್ಯೋತಿ ಆಸ್ಪತ್ರೆಯ ಆವರಣದಿಂದ ನಮ್ಮ ಸಮಾಜ ಭಾಂದವರು ಎಲ್ಲರೂ ಸೇರಿ ಹೊರಡುವುದು ಬಸ್ಸಿನ ದರ ರೂ.600.00 ಪ್ರತೀ ಸದಸ್ಯರಿಗೆ ಎಂದು ನಿಗದಿಪಡಿಸಲಾಗಿದೆ. ಹೊರೆಕಾಣಿಕೆ ಸಲ್ಲಿಸುವರೇ ಅವಕಾಶವಿರುತ್ತದೆ. 20-08-2016ರ ಮುಂಚಿತವಾಗಿ ಹೆಸರು ನೊಂದಾಯಿಸಿಕೊಳ್ಳಿರಿ.

ಅಧಿಕ ಸಂಖ್ಯೆಯಲ್ಲಿ ತಾವು ಪಾಲ್ಗೊಂಡು ಗುರುಕೃಪೆಗೆ ಪಾತ್ರರಾಗಿ.

ಸಂಪರ್ಕ: ಪಿ.ಭಾಸ್ಕರ ರಾವ್. 9448549662

ಕೃಷ್ಣರಾವ್ ನಾವೂರು.9448549732

ಡಾ.ಸದಾಶಿವ ರಾವ್ 9448120411

ಸಮಾಬಾಂಧವರು ಈ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

---

## ಸತ್ಯನಾರಾಯಣ ಪೂಜೆ

ವೈ.ವಿ. ಫಾಲಚಂದ್ರರಾವ್ ಮತ್ತು ಡಾ। ವೀಣಾ ಫಾಲಚಂದ್ರ ಇವರು ಸುಳ್ಯದ ಶಿವಕೃಪಾ ಕಲಾಮಂದಿರದಲ್ಲಿ ತಾ-30-07-16 ನೇ ಶನಿವಾರದಂದು ಶ್ರೀ ಸತ್ಯನಾರಾಯಣ ದೇವರ ಪೂಜಾ ಕಾರ್ಯವನ್ನು ನೆರವೇರಿಸಿದರು. ಸಮಾಜಬಾಂಧವರು ಮತ್ತು ಹಿತೈಷಿಗಳು ಭಾಗವಹಿಸಿ ಅನ್ನಪ್ರಸಾದವನ್ನು ಸ್ವೀಕರಿಸಿದರು.

---

## ಋಗುಪಾಕರ್ಮ ಮತ್ತು ನಾಗರಪಂಚಮಿ ಆಚರಣೆ

ತಾ-07-08-2016 ರಂದು ಬೆಳಿಗ್ಗೆ 7.00 ಗಂಟೆಗೆ ಸಂಘದ ಸಮಾಜ ಬಾಂದವರು, ಕಾಂತಮಂಗಲದ ಶ್ರೀ ಸುಬ್ರಮಣ್ಯ ದೇವಾಲಯುದಲ್ಲಿ ಋಗುಪಾಕರ್ಮವನ್ನು ಶ್ರದ್ಧಾಭಕ್ತಿಯಿಂದ ಆಚರಿಸಿದರು. ನೂತನ ಯಜ್ಞೋಪವಿತವನ್ನು ಧಾರಣೆ ಮಾಡಿ,ಋಷಿತರ್ಪಣ ಮತ್ತು ಪಿತೃತರ್ಪಣ ಸಲ್ಲಿಸಿದರು. ಬಳಿಕ ಉಪಹಾರವನ್ನು ಸೇವಿಸಿದರು.

ನಾಗರಪಂಚಮಿ

ಪ್ರಯುಕ್ತ ನಾಗದೇವರಿಗೆ ಸೇವೆ ಸಲ್ಲಿಸಿದ ಬಳಿಕ ಶ್ರೀ ಸುಬ್ರಮಣ್ಯ ದೇವರ ಮಹಾಪೂಜೆಯಲ್ಲಿ ಪಾಲ್ಗೊಂಡು ಅನ್ನಸಂತರ್ಪಣೆಯ ಅನ್ನಪ್ರಸಾದವನ್ನು ಸಮಾಜಬಾಂಧವರು ಸೇವಿಸಿದರು.ಶ್ರೀ ದೇವರ ಕೃಪೆಯುನ್ನು ಪಡೆದು ಕೃತಾರ್ಥರಾದರು.

---

## ಶ್ರೀ ಗುರುಪೂರ್ಣಿಮಾ ಪಾರಾಯಣ

ತಾ.31-07-2016 ನೇ ರವಿವಾರ ಬೆಳಗ್ಗೆ 7.30ಕ್ಕೆ ಶ್ರೀ ಚೆನ್ನಕೇಶವ ದೇವರ ಸನ್ನಿಧಿಯಲ್ಲಿ ಶ್ರಂಗೇರಿ ಗುರುಗಳ ಆದೇಶದಂತೆ ಗುರುಪೂರ್ಣಿಮೆಯ ಪ್ರಯುಕ್ತ ಗುರುಪೂರ್ಣಿಮಾ ಪಾರಾಯಣ ಕಾರ್ಯಕ್ರಮವು ಸಂಪನ್ನಗೊಂಡಿತು. ಅರಂಬೂರು ಭಾರದ್ವಾಜಾಶ್ರಮದ ವೇದವಿದ್ಯಾಲಯದ ಮುಖ್ಯಗುರುಗಳಾದ ವೇ।ಮೂ।ಶ್ರೀ ವೆಂಕಟೇಶ್ವರ ಶಾಸ್ತ್ರಿಗಳ ನೇತ್ರತ್ವದಲ್ಲಿ, ಅವರ ಶಿಷ್ಯರು ಮತ್ತು ನಮ್ಮ ಸಮಾಜ ಬಾಂಧವರ ಸಹಯೋಗದೊಂದಿಗೆ ಪಾರಾಯಣ ಕಾರ್ಯಕ್ರಮವು ಸಂಪನ್ನಗೊಂಡಿತು. ಸುಮಾರು 40 ಜನರು ಭಾಗವಹಿಸಿದರು. ಶ್ರೀಕೃಷ್ಣದೇವರು,ಶ್ರೀವೇದವ್ಯಾಸರು, ಶ್ರೀ ಆದಿಶಂಕರರು ಮತ್ತು ಶ್ರಂಗೇರಿ ಉಭಯ ಜಗದ್ಗುರುಗಳ ಭಾವಚಿತ್ರಕ್ಕೆ ಮಂಗಳಾರತಿ ಸಲ್ಲಿಸುವುದರೊಂದಿಗೆ ಕಾರ್ಯಕ್ರಮಕ್ಕೆ ಮಂಗಳ ನೀಡಲಾಯಿತು. ದೇವಾಲಯದ ವತಿಯಿಂದ ಉಪಹಾರ ನೀಡಲಾಯಿತು.ಸಂಘವು ಡಾ।ಹರಪ್ರಸಾದ್ ತುದಿಯಡ್ಕರವರಿಗೆ ಧನ್ಯವಾದಗಳನ್ನು ಈ ಮೂಲಕ ಸಲ್ಲಿಸುತ್ತದೆ.

---

## ಅಗಸ್ಟ್ ಮಾಸಿಕ ಸಭೆ

ತಾ.04-08-2016 ನೇ ಗುರುವಾರ ಸಂಜೆ ಗಂಟೆ 6.30 ಕ್ಕೆ ಸಂಘದ ಕಛೇರಿಯಲ್ಲಿ ಸಂಘದ ಅಧ್ಯಕ್ಷತೆಯಲ್ಲಿ ಮಾಸಿಕ ಸಭೆಯು ನಡೆಯಿತು.

ತಾ24-07-2016 ರಂದು ಹೆಬ್ಬೂರು ಕೋದಂಡಾಶ್ರಮ ಶ್ರೀಮಾಧವಾಶ್ರಮ ಸ್ವಾಮಿಗಳ ಗುರುದರ್ಶನ ಕಾರ್ಯಕ್ರಮ ನಡೆಯಿತು.ಇದರ ಲೆಕ್ಕಾಚಾರ ಮಂಡಿಸಲಾಯಿತು.

ತಾ31-07-2016 ರಂದು ಶ್ರೀ



ಗುರುಪೂರ್ಣಿಮಾ ಕಾರ್ಯಕ್ರಮವು ಶ್ರೀ ಚೆನ್ನಕೇಶವ ದೇವಸ್ಥಾನದಲ್ಲಿ ನಡೆಯಿತು. ಇದರ ಲೆಕ್ಕಾಚಾರ ಮಂಡಿಸಲಾಯಿತು.

ತಾ 07-08-2016ರಂದು ಋಗುಪಾಕರ್ಮ ಮತ್ತು ನಾಗರಪಂಚಮಿ ಆಚರಿಸುವುದಾಗಿ ನಿರ್ಧರಿಸಲಾಯಿತು.

ತಾ.27-08-2016ರಂದು ಶ್ರಂಗೇರಿ ಶ್ರೀ ಗುರುದರ್ಶನ ಯಾತ್ರೆ ಕೈಗೊಳ್ಳುವುದಾಗಿ ನಿರ್ಧರಿಸಲಾಯಿತು.ಸೆಪ್ಟಂಬರ್-4 ರಂದು ಸಂಘವು ಹೃದಯ ತಪಾಸಣಾ ಮತ್ತು ರಕ್ತವರ್ಗೀಕರಣ ಶಿಬಿರವನ್ನು ಸಮಾಜಬಾಂಧವರಿಗಾಗಿ ಏರ್ಪಾಡಿಸುವಂತೆ ನಿರ್ಧರಿಸಲಾಯಿತು.ಕಾರ್ಯದರ್ಶಿ ಕೃಷ್ಣರಾವ್ ನಾವೂರುರವರು ಧನ್ಯವಾದ ಸಮರ್ಪಿಸುವುದರೊಂದಿಗೆ ಸಭೆಗೆ ವಿರಾಮ ನೀಡಲಾಯಿತು.

## ಚಿಂತನೆ

### ಭಾತೃ-ಪ್ರೇಮ

ಮಾ ಭತಾ ಭಾತರಂ ದ್ವಿಕ್ಷನ್ಮಾ ಸ್ವಸಾಮುತ ಸ್ವಸಾ।
ಸಮ್ಯಂಚಃ ಸವ್ರತಾ ಭೂತ್ವಾ ವಾಚಂ ವದತ ಭದ್ರಯಾ॥
(ಅಥರ್ವ 3.30.3)

ಸಹೋದರನು ಸಹೋದರನನ್ನು ದ್ವೇಷಿಸದಿರಲಿ, ಜಗಳವಾಡದಿರಲಿ, ಸಹೋದರಿಯು ಸಹೋದರಿಯೊಂದಿಗೆ ದ್ವೇಷಮಾಡದಿರಲಿ.ಎಲ್ಲರೂ ಒಂದೆಡೆ ಇದ್ದು ಪರಸ್ಪರ ಅನುಕೂಲರಾಗಿಯೂ ಏಕಚಿತ್ತರಾಗಿಯೂ ಮತ್ತು ಸಮಾನ ಉದ್ದೇಶವುಳ್ಳವರಾಗಿ ಒಬ್ಬರು ಇನ್ನೊಬ್ಬರ ಬಗ್ಗೆ ಕಲ್ಯಾಣವೂ ಮತ್ತು ಸುಖಪ್ರದ ರೀತಿಯಿಂದ ಪ್ರಿಯವಾದುದ್ದನ್ನೂ ಮತ್ತು ಮಧುರವಾದುದ್ದನ್ನೂ ಆಡಲಿ.

ಎಂತಹ ದಿವ್ಯ ಮತ್ತು ಮಹತ್ತರ ಉಪದೇಶವಾಗಿದೆ !

## ಸುಭಾಷಿತ

ಸಂಸಾರ ವಿಷವೃಕ್ಷಸ್ಯ ದ್ವೇ ಫಲೇ ಹ್ಯಮೃತೋಪಮೇ।
ಸುಭಾಷಿತ ರಸಾಸ್ವಾದಃ ಸಂಗತಿ ಸುಜನೈಃ ಸಹಃ

ಅರ್ಥ : ಸಂಸಾರವೆಂಬ ವಿಷವೃಕ್ಷದಲ್ಲಿ ಅಮೃತದಂಥ ಎರಡು ಹಣ್ಣುಗಳು; ಅವುಗಳೇ ಸುಭಾಷಿತ ರಸಾಸ್ವಾದ ಮತ್ತು ಸಜ್ಜನರ ಸಹವಾಸ.

---

## ಚಂದಾದಾರರಾಗಲು ಈಗ ಅವಕಾಶ

ಸ್ಥಾನಿಕ ಸಂಘದ ಪತ್ರಿಕೆಯು ಅಜೀವ ಚಂದಾದಾರರಾಗಲು ರೂ. 300ನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ. ಶ್ರೀ ಕೃಷ್ಣ ಕನ್ಸಲ್ಟೆನ್ಸಿ, ಮುಖ್ಯರಸ್ತೆ Lic office ಎದುರು, ಸುಳ್ಯ 574239.

ದೂರವಾಣಿ: 9448549732

---

## ಶುಭವಿವಾಹಕ್ಕೆ ಶುಭಾಶಯಗಳು

ಚಿ।ಸೌ। ಕೀರ್ತನಾ ಮತ್ತು ಚಿ। ವಿಶ್ವನಾಥ ಇವರ ವಿವಾಹ 18-08-2016 ನೇ ಗುರುವಾರ ಸುಳ್ಯ ಶಿವಕೃಪಾ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.ನೂತನ ವಧುವರರಿಗೆ ಸಂಪದದ ಶುಭ ಹಾರೈಕೆಗಳು.


| | | |
|---|---|---|
| ಗೌರವಸಂಪಾದಕರು | : | ಶ್ರೀ ರಾಜಾರಾಮ ಜೋತಿಷ್ಯರು |
| ಸಂಪಾದಕರು | : | ಡಾ.ಸದಾಶಿವ ರಾವ್ |
| ಸದಸ್ಯರು | : | ಶ್ರೀ ಬಯಂಬು ಭಾಸ್ಕರ ರಾವ್ |
| | | ಶ್ರೀ ಐ.ಕೆ ರಾಮಚಂದ್ರ ರಾವ್ |
| | | ಶ್ರೀ ಗಿರಿಜಾಶಂಕರ ತುದಿಯಡ್ಕ |
| | | ಶ್ರೀ ಜಯರಾಮ ರಾವ್ ಸಂಪಾಜೆ |

**if not delivered please Return to the publisher**

PRINTED AND PUBLISHED BY DR.P.SADASHIVA RAO ON BEHALF OF SRI SUBRAHMANYA STHANIKA SAMAJA SEVA SANGHA (R) SULLIA,D.K

AND PRINTED AT SAGAR COMPUTERS & DIGITAL STUDIO SHREERAMPETE , SULLIA 574239

AND PUBLISHED AT SULLIA D.K 574239.